ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 2 ಸನಿತಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು, ದಿನಾಂಕ:27.05.2019.

## ಸುತ್ತೋಲೆ

ವಿಷಯ: ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ) ರನ್ವಯ ಪಿಂಚಣಿ ಉದ್ದೇಶಕ್ಕಾಗಿ ಅರ್ಹತಾದಾಯಕ ಸೇವೆಯನ್ನು ಪರಿಗಣಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ 01 ಎಸ್‌ಆರ್‌ಎ 2004, ದಿನಾಂಕ:04.11.2004.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 04 ಎಸ್‌ಆರ್‌ಎ 2010, ದಿನಾಂಕ: 15.02.2012.
3. ಸರ್ಕಾರದ ಆದೇಶ ಸಂಖ್ಯೆ: ಆಇ 09 ಎಸ್‌ಆರ್‌ಎ 2012, ದಿನಾಂಕ: 08.09.2016.
4. ಸರ್ಕಾರದ ಆದೇಶ ಸಂಖ್ಯೆ: ಆಇ 04 ಎಸ್‌ಆರ್‌ಎ 2016, ದಿನಾಂಕ: 10.04.2017.
5. ಸರ್ಕಾರದ ಆದೇಶ ಸಂಖ್ಯೆ: ಆಇ 9 ಸನಿತಿ 2018, ದಿನಾಂಕ:05.11.2018.

*****

ಸರ್ಕಾರದ ಆದೇಶ ಸಂಖ್ಯೆ: ಆಇ 9 ಸನಿತಿ 2018, ದಿನಾಂಕ:05/11/2018 ರನ್ವಯ ಕ.ನಾ.ಸೇ.ನಿ.ನಿಯಮ 247–ಎ ರ ಸೌಲಭ್ಯವನ್ನು ಅರ್ಹ ಪ್ರಕರಣಗಳಲ್ಲಿ ಮಂಜೂರು ಮಾಡುವ ಕುರಿತಾದ ಅಧಿಕಾರವನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ಪ್ರತ್ಯಾಯೋಜಿಸಲಾಗಿದೆ.

ಕ.ನಾ.ಸೇ.ನಿ.ನಿಯಮ 247–ಎ ರನ್ವಯದ ಅಧಿಕ ಅರ್ಹತಾದಾಯಕ ಸೇವಾ ಪರಿಗಣನೆಯ ಸೌಲಭ್ಯದ ಮಂಜೂರಾತಿಯನ್ನು ಸರ್ಕಾರಿ ನೌಕರನ ಜನ್ಮ ದಿನಾಂಕ, ಆತನು ಸರ್ಕಾರಿ ಸೇವೆಗೆ ನೇಮಕಗೊಂಡ ದಿನಾಂಕದಂದು ಆತನ ಪೂರ್ಣ ವಯಸ್ಸು, ನಿವೃತ್ತಿ ದಿನಾಂಕ ಹಾಗೂ ಕ.ನಾ.ಸೇ.ನಿ.ನಿಯಮ 6 ರಲ್ಲಿನ ಅವಕಾಶಗಳಿಗೊಳಪಟ್ಟು, ಸರ್ಕಾರಿ ನೌಕರನು ನಿವೃತ್ತಿ ಹೊಂದಿದ/ಹೊಂದುವ ಆಯಾ ದಿನಾಂಕಗಳಂದು ಜಾರಿಯಲ್ಲಿದ್ದ ಗರಿಷ್ಠ ಅಧಿಕ ಅರ್ಹತಾದಾಯಕ ಸೇವಾ ಪರಿಗಣನೆಯ ನಿಬಂಧನೆಗೊಳಪಟ್ಟು ಪರಿಶೀಲಿಸತಕ್ಕದ್ದು.

ಈ ಸನ್ನಿವೇಶದಲ್ಲಿ ಕ.ನಾ.ಸೇ.ನಿ.ನಿಯಮ 247–ಎ ಗೆ ಸಂಬಂಧಪಟ್ಟಂತೆ ವಿವಿಧ ದಿನಾಂಕಗಳಲ್ಲಿ ಹಲವು ತಿದ್ದುಪಡಿಗಳನ್ನು ತರಲಾಗಿದ್ದು, ಇದರಿಂದಾಗಿ ವಿವಿಧ ಕಾಲದಲ್ಲಿ ಜಾರಿಯಲ್ಲಿದ್ದ ಗರಿಷ್ಠ ಅರ್ಹತಾದಾಯಕ ಸೇವೆಯ ಅವಕಾಶ ಇತ್ಯಾದಿ ಅಂಶಗಳನ್ನೊಳಗೊಂಡಂತೆ ವಿವಿಧ ಇಲಾಖಾ ಮುಖ್ಯಸ್ಥರು ಸ್ಪಷ್ಟೀಕರಣ ಕೋರಿರುವ ಈ ಸನ್ನಿವೇಶದಲ್ಲಿ ಈ ಕೆಳಕಂಡ ಮಾರ್ಗಸೂಚಿಯನ್ನು ಸರ್ಕಾರವು ಹೊರಡಿಸಿದೆ:–

1. ಪ್ರಾರಂಭದಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ) ರನ್ವಯ ಪಿಂಚಣಿ ಉದ್ದೇಶಕ್ಕಾಗಿ ಪರಿಗಣಿಸಬಹುದಾದ ಅರ್ಹತಾದಾಯಕ ಸೇವೆಯ ಗರಿಷ್ಠ ಮಿತಿಯನ್ನು ಎಂಟು ವರ್ಷಗಳಿಗೆ ನಿಗಧಿಪಡಿಸಲಾಗಿತ್ತು. ನಂತರ, ಸದರಿ ನಿಯಮಕ್ಕೆ ಉಲ್ಲೇಖಿತ (1)ರ ಅಧಿಸೂಚನೆಯಲ್ಲಿ ತಿದ್ದುಪಡಿ ತಂದು, ದಿನಾಂಕ 09.11.2004ರಿಂದ ಅನ್ವಯವಾಗುವಂತೆ ಪಿಂಚಣಿ ಉದ್ದೇಶಕ್ಕೆ ಪರಿಗಣಿಸಬಹುದಾದ ಅಧಿಕ ಅರ್ಹತಾದಾಯಕ ಸೇವೆಯ ಗರಿಷ್ಟ ಮಿತಿಯನ್ನು ನಾಲ್ಕು ವರ್ಷಗಳಿಗೆ ನಿಗಧಿಪಡಿಸಲಾಗಿತ್ತು. ತದನಂತರ, ಪುನ: ಸದರಿ ನಿಯಮಕ್ಕೆ ಉಲ್ಲೇಖಿತ (2)ರ ಅಧಿಸೂಚನೆಯಲ್ಲಿ ಸಮಗ್ರವಾಗಿ ತಿದ್ದುಪಡಿ ತಂದು, ದಿನಾಂಕ 15.02.2012ರಿಂದ ಅನ್ವಯವಾಗುವಂತೆ ನೇರ ನೇಮಕಾತಿ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಿ ಪಿಂಚಣಿ ಉದ್ದೇಶಕ್ಕೆ ಪರಿಗಣಿಸಬಹುದಾದ ಅರ್ಹತಾದಾಯಕ ಸೇವೆಯ ಗರಿಷ್ಟ ಮಿತಿಯನ್ನು ಎರಡು ವರ್ಷಗಳಿಗೆ ನಿಗಧಿಪಡಿಸಲಾಗಿರುತ್ತದೆ.

2. ಮುಂದುವರೆದು, ನ್ಯಾಯಾಲಯಗಳ ತೀರ್ಪುಗಳ ಹಿನ್ನೆಲೆಯಲ್ಲಿ, ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಸೇವೆಯಲ್ಲಿ ಕ್ರಮಬದ್ಧಗೊಳಿಸಲಾದ ನೌಕರರ ಪ್ರಕರಣಗಳು ಹಾಗೂ ದಿನಾಂಕ 14.02.2012ರ ಪೂರ್ವದಲ್ಲಿ ನಿವೃತ್ತರಾದ ಎಲ್ಲಾ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ) ರಲ್ಲಿನ ಅವಕಾಶದನ್ವಯ ಪಿಂಚಣಿ ಉದ್ದೇಶಕ್ಕಾಗಿ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸುವ ಪ್ರಕರಣಗಳನ್ನು ಆಡಳಿತ ಇಲಾಖೆಯು ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ನಿಯಮಾನುಸಾರ ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಸೂಕ್ತ ಆದೇಶ ಹೊರಡಿಸಲು ಉಲ್ಲೇಖ(3) ರ ಆದೇಶದನ್ವಯ ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ.

3. ದಿನಾಂಕ:15.02.2012 ರಿಂದ ತಿದ್ದುಪಡಿಯಾಧ ಕ.ನಾ.ಸೇ.ನಿ.ನಿಯಮ 247(ಎ) ರ ಅವಕಾಶಗಳನ್ವಯ, ಈ ನಿಯಮಗಳ ಸೌಲಭ್ಯವು ನೇರ ನೇಮಕಾತಿ ಹೊಂದಿದ ನೌಕರರಿಗೆ ಅನ್ವಯವಾಗುತ್ತಿದ್ದು, ದಿನಗೂಲಿ/ಮಿತವೇತನ ಪದವೀಧರರಾಗಿ ಕಾರ್ಯನಿರ್ವಹಿಸಿ ನಂತರ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡ ಸರ್ಕಾರಿ ನೌಕರರಿಗೆ ಅನ್ವಯವಾಗುವುದಿಲ್ಲವೆಂಬ ನಿಬಂಧನೆಯಿದ್ದರೂ, ನ್ಯಾಯಾಲಯಗಳ ತೀರ್ಪುಗಳ ಹಿನ್ನೆಲೆಯಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಸೇವೆಯಲ್ಲಿ ಕ್ರಮಬದ್ಧಗೊಳಿಸಲಾದ ಪ್ರಕರಣಗಳನ್ನು ಒಳಗೊಂಡು ದಿನಾಂಕ 15.02.2012ರ ನಂತರ ನಿವೃತ್ತರಾದ ಇತರೆ ಎಲ್ಲಾ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 6ರ ಅವಕಾಶಗಳಿಗೊಳಪಟ್ಟು ಪಿಂಚಣಿ ಉದ್ದೇಶಕ್ಕಾಗಿ ಗರಿಷ್ಠ 2 ವರ್ಷಗಳ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸಲು ಉಲ್ಲೇಖ(4) ರ ಆದೇಶದಲ್ಲಿ ಅನುಮತಿಸಲಾಗಿದೆ ಹಾಗೂ ನಿಯಮ 247ಎ ರಲ್ಲಿನ ಅವಕಾಶಗಳನ್ವಯ ಪಿಂಚಣಿ ಉದ್ದೇಶಕ್ಕಾಗಿ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸುವ ಪ್ರಕರಣಗಳನ್ನು ಆಡಳಿತ ಇಲಾಖೆಯು ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ನಿಯಮಾನುಸಾರ ಪರಿಶೀಲಿಸಿ, ಅರ್ಹ ಪ್ರಕರಣಗಳಲ್ಲಿ ಸೂಕ್ತ ಆದೇಶ ಹೊರಡಿಸುವಲ್ಲಿನ ಅಧಿಕಾರ ಪ್ರತ್ಯಾಯೋಜನೆಯು ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಯವರಿಗೆ, ಮುಂದುವರೆಸಲಾಗಿದೆ.

...3/-

4. ಉಲ್ಲೇಖ(5) ರ ಆದೇಶದಂತೆ, ಈ ಕುರಿತಾದ ಅಧಿಕಾರ ಪ್ರತ್ಯಾಯೋಜನೆಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ನೀಡಲಾಗಿದ್ದು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247ಎ ರನ್ವಯ ಪರಿಗಣಿಸಬಹುದಾದ ಗರಿಷ್ಟ ಅಧಿಕ ಅರ್ಹತಾದಾಯಕ ಸೇವೆಯನ್ನು, ಸಂದರ್ಭಾನುಸಾರ ಸರ್ಕಾರಿ ನೌಕರರು 30 ವರ್ಷಗಳ ತರುವಾಯದಲ್ಲಿ ಹುದ್ದೆಗೆ ನೇಮಕ ಹೊಂದಿದ/ಸಕ್ರಮಗೊಂಡ ದಿನಾಂಕದಂದು ಸರ್ಕಾರಿ ನೌಕರರಿಗೆ ಆಗುವ ಪೂರ್ಣ ವಯಸ್ಸನ್ನು ಪರಿಗಣಿಸಿಕೊಂಡು ಹಾಗೂ ಸರ್ಕಾರಿ ನೌಕರನ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿರುವ ನಿಯಮ 247-ಎ ರಲ್ಲಿನ ಗರಿಷ್ಟ ಅವಧಿಯ ನಿರ್ಬಂಧವನ್ನು ಗಮನದಲ್ಲಿರಿಸಿ ಮಂಜೂರು ಮಾಡತಕ್ಕದ್ದು.

5. ಅಧಿಕ ಅರ್ಹತಾದಾಯಕ ಸೇವೆಯ ಗರಿಷ್ಠ ಅವಧಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ರನ್ವಯ ಜಾರಿಯಲ್ಲಿರುವ ಅವಕಾಶಗಳು ಈ ಕೆಳಕಂಡಂತಿವೆ:-

| ಕ್ರಮ ಸಂಖ್ಯೆ | ಸರ್ಕಾರಿ ನೌಕರನ ನಿವೃತ್ತಿ ದಿನಾಂಕದ ಅವಧಿ | ಕೆಸಿಎಸ್‌ಆರ್ ನಿಯಮ 247-ಎ ರನ್ವಯ ಪರಿಣಿಸಬಹುದಾದ ಅಧಿಕ ಅರ್ಹತಾದಾಯಕ ಸೇವೆಯ ಗರಿಷ್ಠ ಅವಧಿ |
|---|---|---|
| 1 | ದಿನಾಂಕ:01.01.1971 ರಿಂದ ದಿನಾಂಕ:08.11.2004 ರ ಅವಧಿಯಲ್ಲಿ ನಿವೃತ್ತಿ ಹೊಂದಿರುವ ಪ್ರಕರಣಗಳು | ಗರಿಷ್ಠ 08 ವರ್ಷಗಳು |
| 2 | ದಿನಾಂಕ:09.11.2004 ರಿಂದ ದಿನಾಂಕ:14.02.2012 ರ ಅವಧಿಯಲ್ಲಿ ನಿವೃತ್ತಿ ಹೊಂದಿರುವ ಪ್ರಕರಣಗಳು | ಗರಿಷ್ಠ 04 ವರ್ಷಗಳು |
| 3 | ದಿನಾಂಕ:15.02.2012 ಮತ್ತು ಅದರ ನಂತರ ನಿವೃತ್ತಿ ಹೊಂದಿರುವ/ಹೊಂದುವ ಪ್ರಕರಣಗಳು | ಗರಿಷ್ಠ 02 ವರ್ಷಗಳು |

Suvarna B S.
(ಬಿ.ಎಸ್.ಸುವರ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).

ಇವರಿಗೆ

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರು.
4. ಎಲ್ಲಾ ಜಿಲ್ಲಾಧಿಕಾರಿಗಳು
5. ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.

...4/-

7. ಮಹಾಲೇಖಪಾಲರು (ಕಂದಾಯ ಸ್ವೀಕೃತಿ ಮತ್ತು ಕಾಮಗಾರಿಗಳು ಮತ್ತು ಅರಣ್ಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
8. ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
14. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
15. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
16. ಸಂಕಲನಕಾರರು, ಕರ್ನಾಟಕ ಗೆಜೆಟೆಡ್, ಮುಂದಿನ ಪ್ರಕರಣೆಗಳಲ್ಲಿ ಪ್ರಕಟಿಸುವುದಕ್ಕಾಗಿ
17. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
18. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
19. ಶಾಖೆಯ ರಕ್ಷಾ ಕಡತ.
20. ಗಣಕ ಯಂತ್ರ ಶಾಖೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ www.finance.kar.nic.in ವೀಕ್ಷಿಸಿ.